ನಿವೃತ್ತ ಇಂಜಿನಿಯರುಗಳ ಮರು ನೇಮಕಾತಿ

2334 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲೋಕೋಪಯೋಗಿ ಇಲಾಖೆಯಲ್ಲಿ 1995ನೇ ಇಸವಿಯಿಂದ ಇದುವರೆವಿಗೆ ಎಷ್ಟು ಜನ ನಿವೃತ್ತ ಇಂಜಿನಿಯರ್‌ಗಳನ್ನು ಮರು ನೇಮಕ ಮಾಡಿ ಕೊಳ್ಳಲಾಗಿದೆ?*

ಆ) *ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಒಂದು

ಆ) ಸಾರ್ವಜನಿಕ ಹಿತದೃಷ್ಟಿಯಿಂದ

ಕಾರ್ಮಿಕರಿಗೆ ನಿವೇಶನ ಮತ್ತು ವಸತಿ ನೀಡಿಕೆ

2336 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಾರ್ಮಿಕರಿಗೆ ಇಲಾಖಾ ವತಿಯಿಂದ ನಿವೇಶನ ಮತ್ತು ವಸತಿ ಕೊಡುವ ಯೋಜನೆ ಸರ್ಕಾರದವರ ಮುಂದಿದೆಯೇ?*

ಆ) *ರಾಜ್ಯದಲ್ಲಿ ಈ ವರ್ಷ ಎಷ್ಟು ಕಾರ್ಮಿಕರಿಗೆ ನಿವೇಶನ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗುವುದು?*

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ.ಎಸ್.ಐ. ಆಸ್ಪತ್ರೆಯ ಸಿಬ್ಬಂದಿ ಕೊರತೆ ಬಗ್ಗೆ

2337 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಇ.ಎಸ್.ಐ. ಸೌಲಭ್ಯಕ್ಕೆ ಒಳಗಾದ ಕಾರ್ಮಿಕ ಹಾಗೂ ಸಿಬ್ಬಂದಿ ವರ್ಗ ಸಂಖ್ಯೆ ಎಷ್ಟು?*

ಇ) *ಸಿಬ್ಬಂದಿ ಹಾಗೂ ಕಾರ್ಮಿಕ ವರ್ಗದಿಂದ ಮತ್ತು ಆಡಳಿತ ಮಂಡಳಿಗಳಿಂದ ಸರ್ಕಾರಕ್ಕೆ ಪ್ರತಿ ವರ್ಷ ಶೇಖರಣೆಯಾಗುವ ಇ.ಎಸ್.ಐ. ವಂತಿಕೆ ಎಷ್ಟು ? (3 ವರ್ಷದ ವಿವರ ನೀಡುವುದು).*

ಈ) *ಈ ಮೊತ್ತದಲ್ಲಿ ಕಾರ್ಮಿಕ ಹಾಗೂ ಸಿಬ್ಬಂದಿ ವರ್ಗದವರಿಗಾಗಿ ಆಸ್ಪತ್ರೆ ನಿರ್ವಹಣೆ ಹಾಗೂ ಔಷಧಿಗಳಿಗಾಗಿ ವೆಚ್ಚವಾದ ಹಣವೆಷ್ಟು (3 ವರ್ಷದ ಪ್ರತ್ಯೇಕವಾದ ವಿವರ ನೀಡುವುದು).*

ಉ) *ಕಾನೂನುಬದ್ಧವಾಗಿ ಈ ಸಿಬ್ಬಂಧಿ ಹಾಗೂ ಕಾರ್ಮಿಕವರ್ಗಕ್ಕೆ ನೀಡಬೇಕಾದ ಇತರೆ ಸೌಲಭ್ಯಗಳಾವುವು, ಅವುಗಳಿಗಾಗಿ ಮಾಡಲಾದ ವೆಚ್ಚ ಎಷ್ಟು ? (3 ವರ್ಷದ ಮಾಹಿತಿ ನೀಡುವುದು)*

ಊ) *ಇಷ್ಟೆಲ್ಲ ವಂತಿಕೆ ಸರ್ಕಾರಕ್ಕೆ ಬರುತ್ತಿದ್ದರೂ ಸಹ ಇ.ಎಸ್.ಐ. ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ, ಔಷಧಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಋ) *ಇನ್ನು ಮುಂದೆ ಇ.ಎಸ್.ಐ. ಆಸ್ಪತ್ರೆಗಳಲ್ಲಿ ಸಿಬ್ಬಂದಿ ಹಾಗೂ ಔಷಧಿಯ ಕೊರತೆಯಾಗದಂತೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ 7 ಕಾ.ರಾ.ವಿ. ಆಸ್ಪತ್ರೆ, 3 ಅನುಬಂಧ ಆಸ್ಪತ್ರೆ ಹಾಗೂ 146 ಚಿಕಿತ್ಸಾಲಯಗಳಿವೆ. (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ).

ಆ) ಈ ಸೌಲಭ್ಯವನ್ನು ರಾಜ್ಯದಲ್ಲಿ 5,78,000 ಕಾರ್ಮಿಕರು ಹಾಗೂ ಅವರ ಕುಟುಂಬದವರು ಪಡೆಯುತ್ತಿದ್ದಾರೆ.

ಇ) ರಾಜ್ಯ ಸರ್ಕಾರವು ಈ ಹಣವನ್ನು ಪಡೆಯುತ್ತಿಲ್ಲ. ಕಾರ್ಮಿಕರು ಹಾಗೂ ಉದ್ಯೋಗದಾತರಿಂದ ವಂತಿಕೆಯನ್ನು ಕಾ.ರಾ.ವಿ. ನಿಗಮ, ನವದೆಹಲಿ ಇವರು ಪಡೆಯುವರು.

ವರ್ಷಾವಾರು ವಿವರ ಈ ಕೆಳಕಂಡಂತೆ ಇದೆ :-

1)	1994-95 ರಲ್ಲಿ	-	ರೂ. 34,61,26,983-21
2)	1995-97 ರಲ್ಲಿ	-	ರೂ. 38,58,91,081-40
3)	1996-97 ರಲ್ಲಿ	-	ರೂ. 46,55,73,130-11

ಈ)

ವರ್ಷ	ಆಸ್ಪತ್ರೆ:ಚಿಕಿತ್ಸಾಲಯ ನಿರ್ವಹಣೆಗಾಗಿ	ಔಷಧಿಗಾಗಿ ಉಂಟಾದ ವೆಚ್ಚ	ಒಟ್ಟು ವೆಚ್ಚ. (ರೂ. ಗಳಲ್ಲಿ)
1994-95	ರೂ. 17,92,56,000	9,11,75,000	27,04,31,000
1995-96	ರೂ. 18,03,90,000	8,60,00,000	26,63,90,000
1996-97	ರೂ. 19,91,45,000	4,54,32,000	24,45,77,000

ಉ) ವಿಮಾದಾರರಿಗೆ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯದ ಜೊತೆಯಲ್ಲಿಯೆ ಈ ಕೆಳಕಂಡ ನಗದು ಸೌಲಭ್ಯವನ್ನು ಕಾರವಿ ನಿಗಮವು ಒದಗಿಸುತ್ತಿದ್ದು ಅವುಗಳೆಂದರೆ:

1) ಖಾಯಿಲೆ ವಿರುದ್ಧ ಸಂಬಳ ಕಡಿತರ ಭದ್ರತೆ.

2) ಹೆರಿಗೆ ಸೌಲಭ್ಯ ಭತ್ಯೆ.

3) ಅಂಗವಿಕಲತೆ ಪರಿಹಾರ.

4) ಅವಲಂಬಿತರಿಗೆ ಪರಿಹಾರ.

5) ಶವಸಂಸ್ಕಾರ ವೆಚ್ಚ.

ಮೇಲ್ಕಂಡ ಸೌಲಭ್ಯಗಳನ್ನು ಒದಗಿಸಲು ಕಾ.ರಾ.ವಿ. ನಿಗಮವು ಕಳೆದ ಮೂರು ವರ್ಷಗಳಲ್ಲಿ ವೆಚ್ಚಮಾಡಿದ ಮೊತ್ತದ ವಿವರ ಕೆಳಕಂಡಂತಿದೆ :

1) 1994-95 ರಲ್ಲಿ ರೂ. 7,00,83,224-35

2) 1995-96 ರಲ್ಲಿ ರೂ. 7,16,04,098-00

3) 1996-97 ರಲ್ಲಿ ರೂ. 7,93,34,947-35

ಊ) ಹೌದು

ಋ) ಹೌದು

ಅನುಬಂಧ

ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯ ಮತ್ತು ಚಿಕಿತ್ಸಾಲಯಗಳ ಬಗ್ಗೆ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಗಳು	ಕಾರಾವಿ ಆಸ್ಪತ್ರೆಗಳು	ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯಗಳು	ಅರೆಕಾಲಿಕ ಕಾರಾವಿ ಚಿಕಿತ್ಸಾಲಯಗಳು	ಎಂಪ್ಲಾಯರ್ ಸೌಲಭ್ಯದ ಚಿಕಿತ್ಸಾಲಯಗಳು	ಆಯುರ್ವೇದ ಚಿಕಿತ್ಸಾಲಯಗಳು	ಕಾರಾವಿ ಅನುಬಂಧ
1	2	3	4	5	6	7	8
1)	ಬೆಂಗಳೂರು	02	50	02	05	02	01
2)	ಚಿತ್ರದುರ್ಗ	01	07	-	-	-	-
3)	ಕೋಲಾರ	-	04	-	-	-	01
4)	ಶಿವಮೊಗ್ಗ	-	01	01	-	-	-
5)	ಬೆಳಗಾಂ	-	09	-	-	-	-
6)	ತುಮಕೂರು	-	03	-	-	-	-
7)	ಬಿಜಾಪುರ	-	03	-	-	-	-
8)	ಉತ್ತರ ಕನ್ನಡ	01	01	-	02	-	-
9)	ಧಾರವಾಡ	01	09	01	-	-	-
10)	ಗುಲ್ಬರ್ಗಾ	-	08	-	01	-	01
11)	ಬಳ್ಳಾರಿ	-	-	-	02	-	-

1	2	3	4	5	6	7	8
12)	ರಾಯಚೂರು	-	01	01	01	-	-
13)	ಮಂಡ್ಯ	-	03	-	-	-	-
14)	ಮೈಸೂರು	01	11	-	-	-	-
15)	ಹಾಸನ	-	01	-	-	-	-
16)	ದಕ್ಷಿಣ ಕನ್ನಡ	01	11	02	01	-	-
	ಒಟ್ಟು	**07**	**125**	**07**	**12**	**02**	**03**